RNU AIR DHARWAD

SEPTEMBER 09, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಹಿಂದುಪರ ಸಂಘಟನೆಗಳು, ಇಂದು ಮಂಡ್ಯ ಜಿಲ್ಲೆಯ ಮದ್ದೂರು ಬಂದ್‌ಗೆ ಕರೆ ನೀಡಿವೆ. ಮುಂಜಾಗ್ರತಾ ಕ್ರಮವಾಗಿ, ಪಟ್ಟಣದಲ್ಲಿ ನಿಷೇಧಾಜ್ಞೆ ಜಾರಿಗೊಂಡಿದೆ. ಭದ್ರತೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ, ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ. ಭಾನುವಾರದ ಗಲಭೆಗೆ ಸಂಬಂಧಿಸಿ, 21 ಜನರನ್ನು ಬಂಧಿಸಲಾಗಿದೆ ಎಂದು, ಗೃಹ ಖಾತೆ ಸಚಿವ ಜಿ. ಪರಮೇಶ್ವರ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ನಾಳೆ, ಬುಧವಾರ ಪಟ್ಟಣದಲ್ಲಿ ಸಾಮೂಹಿಕ ಗಣೇಶ ವಿಸರ್ಜನೆ ಆಯೋಜಿಸಲಾಗಿದ್ದು, ರಾಜ್ಯ ಬಿಜೆಪಿ ನಾಯಕರ ನಿಯೋಗ ಪಾಲ್ಗೊಳ್ಳಲಿದೆ ಎಂದು, ವರದಿಗಳು ತಿಳಿಸಿವೆ.**

<><><>

**ಅನ್ನ ಭಾಗ್ಯದ ಅಕ್ಕಿ ಬದಲು, ದುಡ್ಡು ನೀಡಿದರೆ, ಅಕ್ರಮ ತಡೆಯಲು ಸಾಧ್ಯ ಎಂದು, ಯಾದಗಿರಿ ಜಿಲ್ಲೆ ಉಸ್ತುವಾರಿ ಸಚಿವ, ಶರಣಬಸಪ್ಪ ದರ್ಶನಾಪುರ, ಅಭಿಪ್ರಾಯಪಟ್ಟಿದ್ದಾರೆ. ಅನ್ನ ಭಾಗ್ಯ ಅಕ್ಕಿ ಅಕ್ರಮ ಸಂಗ್ರಹ ಮತ್ತು ಸಾಗಣೆ ಹಿನ್ನೆಲೆ, ನಿನ್ನೆ ನಡೆದ ದಾಳಿ ಕುರಿತು, ಯಾದಗಿರಿಯಲ್ಲಿ ಪ್ರತಿಕ್ರಿಯಿಸಿದ ಸಚಿವರು, ಗುರುಮಠಕಲ್ ಸೇರಿದಂತೆ, ವಿವಿಧೆಡೆ, ನಾಲ್ಕೂವರೆ ಸಾವಿರ ಕ್ವಿಂಟಾಲ್‌ಗೂ ಅಧಿಕ ಅಕ್ಕಿಯನ್ನು ವಶ ಪಡಿಸಿಕೊಳ್ಳಲಾಗಿದೆ. ಈ ಅಕ್ಕಿ ಉಚಿತ ಪಡಿತರದ್ದೇ ಎಂಬ ಶಂಕೆ ವ್ಯಕ್ತವಾಗಿದೆ ಎಂದರು.**

<><><>

**‘ಮಗುವಿನ ಆರೋಗ್ಯ ಹಾಗೂ ಪೌಷ್ಟಿಕತೆ’ ಧ್ಯೇಯದೊಂದಿಗೆ, 8ನೇ ರಾಷ್ಟ್ರೀಯ ಪೋಷಣ್ ಮಾಹ್ – ಮಾಸಾಚರಣೆ, ಈ ತಿಂಗಳ 12 ರಿಂದ, ಅಕ್ಟೋಬರ್ 11ರ ವರೆಗೆ, ದೇಶಾದ್ಯಂತ ನಡೆಯಲಿದೆ.**

<><><>

**ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಸಾರಥ್ಯದಲ್ಲಿ, ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹವನ್ನು, ‘ಸಶಕ್ತ ಜೀವನಕ್ಕಾಗಿ, ಸರಿಯಾದ ಆಹಾರ’ ಧ್ಯೇಯದೊಂದಿಗೆ, ರಾಜ್ಯದ 31 ಜಿಲ್ಲೆಗಳಲ್ಲಿ, 5 ಲಕ್ಷ 75 ಸಾವಿರದ 551 ಕಾರ್ಯಕ್ರಮಗಳನ್ನು, ಆಯೋಜಿಸಿ, ಮಹಿಳೆಯರು ಹಾಗೂ ಮಕ್ಕಳಲ್ಲಿ, ಉತ್ತಮ, ಆರೋಗ್ಯಯುತ ಜೀವನಕ್ಕಾಗಿ, ಪೌಷ್ಟಿಕಾಂಶಯುಕ್ತ ಆಹಾರ ಪದ್ಧತಿಯ, ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಯಿತು.**

<><><>

**ಬೆಂಗಳೂರಿನ ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ, ಪೌಷ್ಟಿಕಾಂಶ ಆಹಾರ ತಜ್ಞೆ, ಶ್ವೇತಾ ಕ್ಯಾತನಗೌಡರ, ಗ್ರಾಮೀಣ ಮಹಿಳೆಯರಲ್ಲಿ ಅಪೌಷ್ಟಿಕತೆ ನಿವಾರಣೆಯ, ಸರಳ ಉಪಾಯಗಳ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.**

<><><>

**ಶ್ವೇತಾ ಕ್ಯಾತನಗೌಡರ ಧ್ವನಿ 35 ಸೆಕೆಂದುಗಳು**

<><><>

**ಗರ್ಭಾವಸ್ಥೆಯಿಂದ, ಮಗುವಿನ ಮೊದಲ ಜನ್ಮ ದಿನದ ವರೆಗೆ, ಉಚಿತ ಆರೋಗ್ಯ ಸಲಹೆಗಳನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಹಾಯವಾಣಿ, ಕಿಲ್ಕಾರಿ ಸಂಖ್ಯೆ, 1600 103 660 ಕರೆ ಮಾಡಿ, ವಾರದ ಕರೆಗಳನ್ನು, ಗರ್ಭಿಣಿಯರು ಹಾಗೂ ತಾಯಂದಿರು, ಕೇಳಿಸಿಕೊಳ್ಳುವಂತೆ, ಮನವಿ ಮಾಡಲಾಗಿದೆ.**

<><><>

**ಪ್ರಧಾನಮಂತ್ರಿ ನಿಕ್ಷಯ್ ಪೋಷಣ್ ಅಭಿಯಾನ ಹಾಗೂ ನಿಕ್ಷಯ ಮಿತ್ರ ಕಾರ್ಯಕ್ರಮದಡಿ, ಕ್ಷಯ ರೋಗಿಗಳಿಗೆ, ಪೌಷ್ಟಿಕ ಆಹಾರ ವಿತರಣೆ, ಧಾರವಾಡದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ, ಜರುಗಿತು. ಜಿಲ್ಲಾಧಿಕಾರಿ ದಿವ್ಯಾ ಪ್ರಭು ಪಾಲ್ಗೊಂಡು, ರಾಷ್ಟ್ರೀಯ ಹೆಪಟೈಟಿಸ್ ನಿರ್ಮೂಲನಾ ದಿನಾಚರಣೆಗೆ ಸಹ, ಚಾಲನೆ ನೀಡಿದರು.**

<><><>

**ಕಿತ್ತೂರು ಕರ್ನಾಟಕದ, ಧಾರವಾಡ ಜಿಲ್ಲೆಯಾದ್ಯಂತ, ಒಟ್ಟು 93 ಸಾವಿರದ 496 ದಶಾಂಶ 9-8 ಹೆಕ್ಟರ್ ಕೃಷಿ ಭೂಮಿಯಲ್ಲಿ, ಬೆಳೆ ಹಾನಿ ಸಂಭವಿಸಿದೆ; ಬೆಳೆ ಹಾನಿ ಸಮೀಕ್ಷೆ ಅಂತಿಮ ವರದಿಯನ್ನು, ಜಾಲತಾಣದಲ್ಲಿ ದಾಖಲಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ತಿಳಿಸಿದ್ದಾರೆ. ಜಿಲ್ಲಾಧಿಕಾರಿ ದಿವ್ಯಾ ಪ್ರಭು ಸೇರಿದಂತೆ, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು, ಕಂದಾಯ, ತೋಟಗಾರಿಕೆ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು, ಸಭೆಯಲ್ಲಿ ಪಾಲ್ಗೊಂಡಿದ್ದರು. ಸೂಕ್ತ ಪರಿಹಾರ ಬಿಡುಗಡೆ ಮಾಡುವಂತೆ, ಮುಖ್ಯಮಂತ್ರಿ ಅವರೊಂದಿಗಿನ, ವಿಡಿಯೋ ಸಂವಾದದ ವೇಳೆ, ಸಚಿವ ಲಾಡ ಮನವಿ ಮಾಡಿದರು.**

<><><>

**ಚಿಕ್ಕಬಳ್ಳಾಪುರ ಜಿಲ್ಲೆಯ, ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ, ನಾಳೆ ಬೆಳಗ್ಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ಯೋಜನೆಗಳ ಕುರಿತ ಜಾಗ್ರತಿ ಕಾರ್ಯಕ್ರಮ, ಕನ್ನಡ ಭವನದಲ್ಲಿ ಜರುಗಲಿದೆ. ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಸಿ.ಸುಧಾಕರ ಭಾಗವಹಿಸಲಿದ್ದಾರೆ.**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನ್ಮ ದಿನ, ಈ ತಿಂಗಳ 17 ರಿಂದ ಅಕ್ಟೋಬರ್ 2 ರ ವರೆಗೆ, ಸೇವಾ ಪಾಕ್ಷಿಕ ಆಯೋಜಿಸಲಾಗಿದೆ ಎಂದು, ವಿಪಕ್ಷದ ಮೇಲ್ಮನೆ ಮುಖ್ಯ ಸಚೇತಕ ಎನ್. ರವಿಕುಮಾರ ತಿಳಿಸಿದ್ದಾರೆ. ಹಾವೇರಿ ಬಿಜೆಪಿ ಕಚೇರಿಯಲ್ಲಿ, ಸೇವಾ ಪಾಕ್ಷಿಕ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ, ಅವರು ಮಾತನಾಡಿದರು. ಅಭಿಯಾನದ ಅಂಗವಾಗಿ ರಕ್ತದಾನ ಶಿಬಿರ, ಸ್ವಚ್ಛತಾ ಅಭಿಯಾನ, ವಿಕಸಿತ ಭಾರತ ಚಿತ್ರಕಲಾ ಸ್ಪರ್ಧೆ, ಆರೋಗ್ಯ ಶಿಬಿರ, ಮೋದಿ ವಿಕಾಸ ಮ್ಯಾರಥಾನ್ ಸಹಿತ, ವಿವಿಧ ಹಲವು ಕಾರ್ಯಕ್ರಮ ಜರುಗಲಿವೆ ಎಂದರು.**

<><><>

**ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್, ಇಂದು ಧಾರವಾಡ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ 2:30 ಕ್ಕೆ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ.**

<><><>

**ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ, ಮುಖ್ಯಮಂತ್ರಿ ಕಪ್, ದಸರಾ ಕ್ರೀಡಾಕೂಟಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ, ಶರಣಬಸಪ್ಪ ದರ್ಶನಾಪುರ, ಚಾಲನೆ ನೀಡಿದರು.**

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದ, ಭಗತ್‌ಸಿಂಗ್ ಕ್ರೀಡಾಂಗಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಚ್ ಮುನಿಯಪ್ಪ, ದಸರಾ ಕ್ರೀಡಾಕೂಟ ಉದ್ಘಾಟಿಸಿದರು.

<><><>

ತುಮಕೂರು ಜಿಲ್ಲಾ ಮಟ್ಟದ ದಸರಾ ಉತ್ಸವದಲ್ಲಿ, ಈ ಬಾರಿ ಹೆಲಿಕಾಪ್ಟರ್ ಪ್ರಯಾಣ, ಬಿಸಿಗಾಳಿ ಬಲೂನ್ ಹಾರಾಟ ಹಾಗೂ ಡ್ರೋನ್ ಪ್ರದರ್ಶನ ಆಯೋಜಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ನಗರದ ಕೇಂದ್ರ ಗ್ರಂಥಾಲಯದಲ್ಲಿ, ದಸರಾ ಕ್ರೀಡಾಕೂಟದ ಲಾಂಛನ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ದಸರಾ ಕ್ರೀಡಾಕೂಟದಲ್ಲಿ, ಟೆನಿಸ್, ಶೂಟಿಂಗ್, ಕಬಡ್ಡಿ, ವಾಲಿಬಾಲ್ ಹಾಗೂ ಕುಸ್ತಿ ಪಂದ್ಯಾವಳಿ ನಡೆಯಲಿವೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.